ಆಗಿತ್ತಲ್ಲ. ಕೆಲವು ಘಟನೆಗಳು ಸತ್ಯಕ್ಕೆ ದೂರವಾದಂತಿದ್ದರೂ, ಘಟನೆಗಳನ್ನು ಅನುಭವಿಸಿದವರಲ್ಲಿ ಭೂತಗಳು –ದೈವ್ವಗಳು ನಿಜವಾದದ್ದೂ ಕೇಳಿದ್ದೆ–. ಹೀಗಿರುವಾಗ ಪ್ರೊಫೆಸರ್ ಮಾತನ್ನು ನಂಬುವುದು ಹೇಗೆ? `ನಂಬಿ ಕೆಟ್ಟವರಿಲ್ಲ' ಎಂಬ ಮಾತನ್ನು ಅವರೇ ಪದೇಪದೆ ಹೇಳುತ್ತಿದ್ದವರು...!

ಪ್ರೊಫೆಸರ್ 'ತಲೆಮಾಂಸ'ದ ಬಗ್ಗೆ ಬಹಳ ಹೊತ್ತು ಗಾಢವಾದ ಚಿಂತನೆಯ ಆಳದಲ್ಲಿ ಮುಳುಗಿದೆ –ಎದ್ದೆ. ಒಂದು `ಕುಟುಂಬ' ಎಂದ ಮೇಲೆ ಅದರ ಚಿತ್ರಣ ಸ್ಪಷ್ಟ. ಅಜ್ಜ– ಅಜ್ಜಿ, ತಂದೆ– ತಾಯಿ– ಮಕ್ಕಳು; ಅಣ್ಣ– ತಮ್ಮ, ಅಕ್ಕ– ತಂಗಿ; ಬಂಧು–ಬಳಗ ಎಲ್ಲವೂ ಒಂದೊಂದು ಮುಖ(ವಾಡ)ಗಳನ್ನು ಹೊತ್ತುಕೊಂಡಿರುತ್ತವೆ. ಹಲವರಿಗೆ ಭೂತಗಳ ಮೇಲಿನ ನಂಬಿಕೆಯಾದರೆ, ಕೆಲವರಿಗೆ ದೈವ್ವಗಳ ಮೇಲಿನ ನಂಬಿಕೆಯಾಗಿರುತ್ತದೆ. ಭೂತವನ್ನು ನಂಬಿದವನು ದೈವ್ವವನ್ನು ನಂಬದೆಯೂ ಇರಬಹುದು; ದೈವ್ವವನ್ನು ನಂಬಿದವನು ಭೂತವನ್ನು ನಂಬದೆಯೂ ಇರಬಹುದು. ಹಾಗಾಗಿ ಎಷ್ಟೋ ಸಂದರ್ಭಗಳಲ್ಲಿ ಹಲವರಿಗೆ ಭೂತ ಸತ್ಯಕ್ಕೆ ಹತ್ತಿರವಾಗಿಯೂ, ಕೆಲವರಿಗೆ ದೈವ್ವ ಸತ್ಯಕ್ಕೆ ದೂರವಾಗಿಯೂ ಅನುಭವಕ್ಕೆ ಬಂದಿರಬಹುದು. ಸಾಧ್ಯ– ಅಸಾಧ್ಯತೆಗಳ ನಡುವೆ ಒಂದು `ಬದುಕು' ಕುಟುಂಬದೊಳಗೆ ಪ್ರವೇಶಿಸಿದ ಮಾತ್ರಕ್ಕೆ ಎಲ್ಲರಿಗೂ ಒಂದೇ ಹಣೆಪಟ್ಟಿ ಕಟ್ಟಿ ಬಿಡುವುದಾದರೂ ಹೇಗೆ?

ನಾನು ಇದ್ದಕ್ಕಿದ್ದಂತೆ ಡಿಪ್ರೆಷನ್‌ಗೆ ಒಳಗಾದೆ. ಭೂತ–ದೈವ್ವಗಳ ಸುತ್ತ ಮನಸ್ಸು ಸುತ್ತಲಾರಂಭಿಸಿತು. ಮುಂದಿನ ಕಾರ್ಯತಂತ್ರಕ್ಕಾಗಿ ಯೋಜನೆ ರೂಪಿಸಿದೆ.

★★★

## ತಲೆ: ಮೂರು

–––––––––––––ದಿನಗಳು ವಾರಗಳಾಗಿ ಉರುಳಿತು.

ನಾನು ಪ್ರೊಫೆಸರ್ ಅವರ ಇಬ್ಬರು ಧರ್ಮಪತ್ನಿಯರಿಂದ ಎಲ್ಲ ವಿವರಗಳನ್ನು ತಿಳಿದುಕೊಂಡೆ. ಪ್ರೊಫೆಸರ್ ಅವರ `ತರವಾಡು' ಮನೆಯ `ಪಂಜುರ್ಲಿ –ಕಲ್ಲುರ್ಟಿ' ಭೂತಕೋಲದ ದಿನದಂದೇ ಅಧ್ಯಯನ ಆರಂಭಿಸಿದೆ. ಎಲ್ಲಾ ವರ್ಗದ ಜನರ ಜೊತೆಗೆ ಸ್ನೇಹ– ಸಲುಗೆಯಿಂದ ನಡೆದುಕೊಳ್ಳಲು ಸಾಧ್ಯವಾಯಿತು. ಭೂತಗಳು– ದೈವ್ವಗಳ ಬಗ್ಗೆ ನನ್ನೆಲ್ಲ ತರ್ಕ, ವಾದ, ವಿಚಾರಗಳಿಗೆ ಜನರು ನೇರವಾಗಿ ಸ್ಪಂದಿಸಿದರು. ಭೂತಕೋಲಗಳ ಗುಡಿಗಳ, ದೈವ್ವಗಳ ಸಂಚಾರದ ಸ್ಥಳಗಳ ಘಟನೆಗಳನ್ನು ಕೂಲಂಕಷವಾಗಿ ಅಭ್ಯಸಿಸಿದೆ. ಆಗ ದೈವ್ವ ಮೆಟ್ಟಿಕೊಂಡವರು ಯಾವುದೇ ಆತಂಕ, ಅನುಮಾನಗಳಿಲ್ಲದೆ ನನ್ನಲ್ಲಿ ಅಳಲನ್ನು ತೋಡಿಕೊಂಡದ್ದು ನಿಜಕ್ಕೂ ನನಗೆ ಆಶ್ಚರ್ಯವಾಗಿತ್ತು. ಭೂತಕೋಲಗಳು ಹಾಗೂ ದೈವ್ವಗಳ ನೆಲೆಗಳ ಪ್ರದೇಶಗಳಲ್ಲಿನ ಒಳಗ್ರಾಮಗಳಲ್ಲಿ, ಮೂಢನಂಬಿಕೆಗಳ ಬಗೆಗೆ ಜನರಲ್ಲಿರುವ ಭಯ, ಆತಂಕಗಳನ್ನು ಹೋಗಲಾಡಿಸಿ, ಅವರ ಬಗ್ಗೆ ನಂಬಿಕೆಗಳಿಗೆ ಪೂರಕವಾಗುವಂತಹ ವಿಷಯಗಳಿಂದ ಅಧ್ಯಯನಕ್ಕೆ ಅನೇಕ ಮಹತ್ವದ ವಿಷಯಗಳೇನೋ ಸಿಕ್ಕಿದವು. ಆದರೆ ಭೂತ–ದೈವ್ವಗಳ ನಂಬಿಕೆಗಳಲ್ಲಿರುವ ಜನರ ಅಸಹಾಯಕತೆಯನ್ನು ನೆನೆಸಿಕೊಂಡು ತೀರಾ ಭಾವುಕನಾಗುತ್ತಿದ್ದೆ. ಇಂಥ ಭಾವುಕತೆಯಲ್ಲಿ ಅಧ್ಯಯನ ಮಾಡುವುದು ಸಾಧ್ಯವಾಗದೆ ಸೋಲುತ್ತೇನೆ ಎಂಬ ಭಯ ಭೂತವಾಗಿ ಕಾಡಿದ್ದಿದೆ... ದೈವ್ವಗಳಿಂದ ಮೆಟ್ಟಿಸಿಕೊಳ್ಳುವ ಮೊದಲು ಓಡಿ ಬಿಡಲೇ ಎಂದೂ ಯೋಚಿಸಿದ್ದಿದೆ....! ಆದರೆ ಎಂತಹ ಸಂದಿಗ್ಧ ಮನಸ್ಥಿತಿಯಲ್ಲೂ ನನಗೆ ಬೆನ್ನೆಲುಬಾದವರು ಪ್ರೊಫೆಸರ್!

ಅಂದು ರಾತ್ರಿ ಹನ್ನೊಂದೂವರೆ ಗಂಟೆಯಾಗಿತ್ತು.

'ಡಿಂಗ್ ಡಾಂಗ್.... ಡಿಂಗ್ ಡಾಂಗ್...' ಕಾಲಿಂಗ್ ಬೆಲ್ ಕಿರುಚಿತು. 'ಯಾರಪ್ಪಾ ಇಷ್ಹೊತ್ತಿನಲ್ಲಿ...?' ಎಂದು ಮನಸ್ಸಿನಲ್ಲೇ ಮಾತನಾಡಿಕೊಂಡು ಮೊಗಸಾಲೆಗೆ ಬಂದೆ. ಹೊರಗಿನ ಲೈಟ್ ಹಾಕಿದೆ. ಕೇಳಿದೆ:

'ಯಾರು...? ಯಾರದು...?'

ಯಾವ ಉತ್ತರವೂ ಬರಲಿಲ್ಲ. ಎರಡೆರಡು ಬಾರಿ ಕೇಳಿದೆ. ಊಹುಂ ಉತ್ತರವಿಲ್ಲ. ತುಸು ಹೊತ್ತು ಮೌನವಾದೆ. ಮತ್ತೆ ಕಾಲಿಂಗ್‌ಬೆಲ್ ಕಿರುಚಿತು.

'ಡಿಂಗ್ ಡಾಂಗ್.... ಡಿಂಗ್ ಡಾಂಗ್...'

ನಿಧಾನಕ್ಕೆ ಬಾಗಿಲು ತೆರೆದೆ. ದಿಗ್ಭ್ರಾಂತನಾದೆ! ಭಯಾನಕವಾದ ಮುಖವೊಂದು ಕಾಣಿಸಿಕೊಂಡಿತು. ಆ ಮುಖ ವಿಕಾರವಾಗಿತ್ತು. ಕೊಳೆತ ಶವದ ಮುಖದಂತಿತ್ತು. ನನ್ನ ಶರೀರವಿಡೀ ಕಂಪಿಸಿತು. ತೊದಲಿದೆ:

'ಯಾರು? ಯಾರದು...?'

'ನಾನು... ನಾನೇ...! ನೀನು ಹುಡುಕಾಡುತ್ತಿರುವ ಭೂತ... ದೈವ್ವ!' ಯಾಕೋ ಸ್ವರ ಪರಿಚಿತವೆನಿಸಿತು. ಒಮ್ಮೆಲೇ ಧೈರ್ಯ ಮೈಗೂಡಿತು. ಕೇಳಿಯೇ ಬಿಟ್ಟೆ:

'ಸಾರ್! ನೀವಾ...? ನೀವು...?'

ಮುಖವಾಡವನ್ನು ಕಳಚುತ್ತಾ ನಿಂತ ಪ್ರೊಫೆಸರ್ ನಗುತ್ತಾ ಹೇಳಿದರು:

'ಅಲ್ಲ ಕಣೋ... ನಿನಗೆ ಇಷ್ಟೊಂದು ಧೈರ್ಯವಾದ್ರೂ ಹೇಗೆ ಬಂತೋ...?'

'ಸಾರ್, ಎಲ್ಲಾ ನಿಮ್ಮ ದಯೆ... ನಾನು ಹೆಚ್ಚುಕಮ್ಮಿ ಎಲ್ಲಾ ಭೂತ–ದೈವ್ವಗಳ ಲೋಕದಲ್ಲಿ ಸಂಚರಿಸಿದೆ... ಸಾಕಷ್ಟು ವಿಷಯಗಳನ್ನೂ ತಿಳಿದುಕೊಂಡೆ... ನಿಮ್ಮ ಧರ್ಮಪತ್ನಿಯರ ಸಹಕಾರದಿಂದ ನಾನಂತೂ ಪಿಎಚ್ಡಿ ಗ್ರಂಥವನ್ನೂ ಬರೆದು ಮುಗಿಸಿಬಿಟ್ಟೆ..'

'ನಿಜವೇ...?' ಪ್ರೊಫೆಸರ್ ಮನೆಯ ಒಳಗಡೆ ಬಂದವರೇ ಸೋಫಾದಲ್ಲಿ ಕುಳಿತು ನನ್ನನ್ನೇ ತದೇಕಚಿತ್ತದಿಂದ ನೋಡಲಾರಂಭಿಸಿದರು.

'ಹೌದು ಸರ್... ಆದರೆ ನನ್ನ ಅಧ್ಯಯನ ಇಷ್ಟೊಂದು ದೀರ್ಘವಾಗಿ ಸಮಯ ತೆಗೆದುಕೊಳ್ಳುತ್ತದೆಯೆಂದು ತಿಳಿದಿರಲಿಲ್ಲ...'

'ಅಂದ ಹಾಗೆ ಶೀರ್ಷಿಕೆ ಏನು ಕೊಟ್ಟಿದ್ದೀಯಾ?'

'ಸರ್, ಶೀರ್ಷಿಕೆ.... `ತಲೆಮಾಂಸ' ಅಂತ ಇಟ್ಕೊಂಡಿದ್ದೀನಿ...!'

'ವಾಟ್! ತಲೆಮಾಂಸನಾ...?' ಅವರು ಎದ್ದುನಿಂತರು.

'ಹೌದು ಸರ್...! ಈ ಅಧ್ಯಯನದ ಪೂರ್ಣ ಯಶಸ್ಸು ನಿಮ್ಮದು... ನಿಮ್ಮದೇ ಚಿಂತನೆ ಹಾಗೂ ವಿಷಯ...'

'ಅದಕ್ಕೆ...?'

'ನೀವೇ ಹೇಳಿದ್ರಲ್ಲಾ... ನೀವು `ತಲೆಮಾಂಸ' ಇದ್ದ ಹಾಗೇಂತ... ನಿಮ್ಮ ವಿದ್ಯಾರ್ಥಿಗಳೂ ನಿಮಗಿಟ್ಟ ಅಡ್ಡ ಹೆಸರೇ ನನ್ನ ಅಧ್ಯಯನಕ್ಕೂ ಇರಲೆಂದು ಖುಷಿಯಿಂದ ಹೆಸರಿಸಿದೆ ಅಷ್ಟೇ..'

ತಕ್ಷಣವೇ `ರಪ್' ಎಂಬ ಶಬ್ದದೊಂದಿಗೆ ಬಲವಾದ ಏಟೊಂದು ನನ್ನ ಕೆನ್ನೆಯನ್ನು ಅಪ್ಪಳಿಸಿತ್ತು! ಕಣ್ಣು ಬಿಡುವಷ್ಟರಲ್ಲಿ ಬೆಳಕು ಹರಿಯಲು ಒಂದೆರಡು ತಾಸುಗಳಿತ್ತು. ವಾಸ್ತವಕ್ಕೆ ಜಾರಿದಾಗ ಭಯವೂ, ಆತಂಕವೂ ಆವರಿಸಿತು. ಅಂದರೆ... ನಾನು ಕಂಡದ್ದು ನಿಜಕ್ಕೂ ಕನಸಾಗಿತ್ತು!

★★★

## ತಲೆ+ಮಾಂಸ

–––––––––––ಬೆಳಗಿನ ಹೊತ್ತು.

ಹೊಂಬಿಸಿಲು ಮನೆಯ ಅಂಗಳದಲ್ಲಿ ರಂಗೋಲಿಯಿಡುತ್ತಿತ್ತು. ಮನೆಯ ಗೇಟನ್ನು ತೆರೆದು ಒಳಗಡೆ ಬಂದ ಪ್ರೊಫೆಸರ್ ಕೈಯಲ್ಲಿ ಒಂದೆರಡು ಪತ್ರಿಕೆಗಳಿದ್ದವು. ನನ್ನನ್ನು ನೋಡುತ್ತಲೇ ಹೇಳಿದರು:

'ಎಲ್ಲಾ ಪತ್ರಿಕೆಗಳಲ್ಲೂ ನಿನ್ನ ಫೋಟೋ ಮತ್ತು ಸುದ್ದಿ ಪ್ರಕಟವಾಗಿದೆ. ನಿನ್ನ ಪ್ರಬಂಧ `ತಲೆಮಾಂಸ'ಕ್ಕೆ ಪಿಎಚ್ಡಿ ಪದವಿ ಲಭಿಸಿದೆ ಕಣೋ' ಎನ್ನುತ್ತಾ ಬಾಹುಗಳಲ್ಲಿ ಬಂಧಿಸಿದರು...

ನಾನು ತದೇಕಚಿತ್ತದಿಂದ ಅವರ ಮುಖವನ್ನೇ ದಿಟ್ಟಿಸುತ್ತಿದ್ದೆ. ಅವರ ಬಿಗಿತ ಇನ್ನಷ್ಟು ಬಿಗಿಯಾಗುತ್ತಲೇ ಹೋಯಿತು... ಉಸಿರಾಟ ಕಷ್ಟವೆನ್ನಿಸಿತು... ಉಸಿರಾಟಕ್ಕೆ ಗಾಳಿಯೇ ಸಿಗುತ್ತಿಲ್ಲವೇನೋ ಅನ್ನಿಸಿತು... ಕೈಕಾಲುಗಳಲ್ಲಿ ಕಂಪನ.... ತುಟಿಗಳು ಅದುರಿತು... ಒಂದೇ ಒಂದು ಶಬ್ದವನ್ನೂ ಉಸುರಲಾಗಲಿಲ್ಲ... ಏದುಸಿರು ಬಿಡುತ್ತಿದ್ದಂತೆಯೇ ಹಿಂದಿನ ರಾತ್ರಿ ಕನಸ್ಸಿನಲ್ಲಿ ಪ್ರೊಫೆಸರ್ ಧರಿಸಿ ಬಂದಿದ್ದ ಭೂತ– ದೈವ್ವದ ಭಯಾನಕ ಮುಖವಾಡ ಕಣ್ಣೆದುರು ನರ್ತಿಸಿದಂತಾಯಿತು... ಪ್ರೊಫೆಸರ್ ಬಾಹುಗಳ ಬಂಧನದಿಂದ ಬಿಡಿಸಿಕೊಳ್ಳಲಾಗಲಿಲ್ಲ.

–ಚಡಪಡಿಸಿದೆ....

–ಕೊಸರಾಡಿದೆ....

–ಕಣ್ಣುಗಳು ಮಂಜಾದುವು....

–ದೃಶ್ಯಗಳು ಮಂಕಾದುವು....

ನಾನು ನಿಂತಲ್ಲೇ ಕುಸಿಯಲಾರಂಭಿಸಿದೆ!